









# ವಿಶ್ವದ ಅವಳಿ ಮಕ್ಕಳ ರಾಜಧಾನಿ!

ಆಫ್ರಿಕಾ ಖಂಡದ ನೈಜೀರಿಯಾ ದೇಶದ ನೈರುತ್ಯ ಭಾಗದಲ್ಲಿ ಒಂದು ಊರಿದೆ. ಅದನ್ನು ಜಗತ್ತಿನ ಅವಳಿಜವಳಿ ಮಕ್ಕಳ ರಾಜಧಾನಿ ಎಂದೇ ಗುರುತಿಸಲಾಗಿದೆ. ಆ ಊರ ಹೆಸರು ಇಗಬೋ ಓರಾ. ಅಲ್ಲಿ ಯೋರುಬಾ ಎಂಬ ಪ್ರಾಚೀನ ಜನಾಂಗ ವಾಸಿಸುತ್ತದೆ. ವಿಶ್ವದಲ್ಲಿಯೇ ಅತಿ ಹೆಚ್ಚು ಅವಳಿ ಮಕ್ಕಳು ಜನಿಸುವುದು ಆ ಊರಿನಲ್ಲಿಯೇ ಎಂಬುದು ಈ ಊರಿನ ವಿಶೇಷ.

ಅವಳಿಜವಳಿಗಳಲ್ಲಿ ಎರಡು ಪ್ರಕಾರ; ಒಂದು ಎರಡೂ ಮಕ್ಕಳ ಲಿಂಗ ರೂಪ ಭಿನ್ನವಾಗಿರುವುದು, ಇನ್ನೊಂದು ಲಿಂಗರೂಪ ಒಂದೇ ಬಗೆ ಆಗಿರುವುದು. ಇಗಬೋ ಓರಾದಲ್ಲಿ ಜನಿಸುವ ಎಲ್ಲ ಅವಳಿಗಳ ಲಿಂಗ ರೂಪ ಒಂದೇ ಆಗಿರುತ್ತದೆ. ಕಾರಣ ಅದು ಏಕರೂಪಿ ಅವಳಿಗಳ ಊರು ಕೂಡ!

ಅವರು ಸೇವಿಸುವ ಆಹಾರವೇ ಅವಳಿ ಮಕ್ಕಳ ಜನನಕ್ಕೆ ಕಾರಣ ಎಂದು ಆ ಊರ ಜನ ಭಾವಿಸಿದ್ದಾರೆ. ಅವರು ಹೆಚ್ಚಾಗಿ ಅಲ್ಲಿನ ಓಕ್ರಾ ಎಲೆಗಳನ್ನು ತಿನ್ನುತ್ತಾರೆ. ಕಸವಾ ಹಾಗೂ ಯಾಮ್ ಎಂಬ ಆಹಾರವನ್ನು ಬಳಸುತ್ತಾರೆ. ಇದೇ ಅವಳಿ ಮಕ್ಕಳ ಜನನಕ್ಕೆ ಕಾರಣ ಎನ್ನಲಾಗುತ್ತಿದೆ.

100 ವಿದ್ಯಾರ್ಥಿಗಳಿರುವ, ಅಲ್ಲಿನ ಒಂದು ಶಾಲೆಯಲ್ಲಿ 9 ಜೋಡಿ ಅಂದರೆ 18 ಏಕರೂಪದ ಅವಳಿ ಮಕ್ಕಳಿವೆ. ಅಲ್ಲಿನ ಒಯನಿಕಿ ಬಾಮಿಮೊರೆ ಎಂಬ ತಾಯಿ ಎಂಟು ಬಾರಿ ಅವಳಿ ಮಕ್ಕಳಿಗೆ ಜನ್ಮ ನೀಡಿದ್ದಾಳೆ. ಅದಕ್ಕೆ ತಾನು ಹೆಚ್ಚು ಪ್ರಮಾಣದಲ್ಲಿ ಓಕ್ರಾ ಎಲೆಗಳನ್ನು ಬಳಸುವುದೇ ಕಾರಣ ಎಂಬ ವಿವರಣೆಯನ್ನು ನೀಡುತ್ತಾಳೆ.

ಅಲ್ಲಿನ ಒಬ್ಬ ಸ್ತ್ರೀರೋಗ ಹಾಗೂ ಪ್ರಸೂತಿ ತಜ್ಞರ ಅಭಿಪ್ರಾಯ ಬೇರೆಯೇ ಇದೆ. ಎಕುಜುಮಿ ಎಂಬ ವೈದ್ಯರು ‘ಬರೀ ಆಹಾರದ ಪ್ರಭಾವದಿಂದ ಹೀಗಾಗದು. ಅದಕ್ಕೆ ಅಲ್ಲಿನ ಪರಿಸರ ಹಾಗೂ ಆ ಜನಾಂಗದ ವಂಶವಾಹಿಗಳೂ ಕಾರಣ’ ಎನ್ನುತ್ತಾರೆ. ಏನೇ ಆಗಲಿ ಇಗಬೋ ಓರಾ ವಿಶ್ವದ ಗಮನಸೆಳೆದ ಊರು ಎಂಬುದಂತೂ ನಿಜ.

■ ಸುಭಾಸ ಯಾದವಾಡ